**ಓ.ಎಸ್. ನಂಬರ್ಃ 74/2019** **ಡಿ ಡಬ್ಲೂಃ 1**

ದಿಃ 26-11-2024ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು** ಃ ವಾದಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ

ನನ್ನ ತಾಯಿಯ ಹೆಸರು ನಂದಮ್ಮ. ನನ್ನ ತಾಯಿಯ ಅಪ್ಪನ ಹೆಸರು ಬಿಚ್ಚಯ್ಯ. ಸದರಿ ಬಿಚ್ಚಯ್ಯರವರಿಗೆ 4 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವುಗಳೆಂದರೆ ಬನಗಯ್ಯ, ಗದಗಯ್ಯ, ನಂದಮ್ಮ ಹಾಗೂ ಸರಸ್ವತಿ ಎಂದರೆ ಸರಿ. ಸದರಿ ಸರಸ್ವತಿಯವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರು ಶರಣಯ್ಯ. ನಂದಮ್ಮ ಹಾಗೂ ಸರಸ್ವತಿ ಇಬ್ಬರ ಮದುವೆ ನನ್ನ ತಂದೆಯೊಂದಿಗೆ ಆಗಿರುತ್ತದೆ ಎಂದರೆ ಸರಿ. ಸರಸ್ವತಿಯವರಿಗೆ ಕಣ್ಣು ಕಾಣದೇ ಇರುವುದರಿಂದ ಸದರಿ ಬಿಚ್ಚಯ್ಯ ಈತನು ಹೊಲ ಕೊಟ್ಟು ನನ್ನ ತಂದೆಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಸರಸ್ವತಿಯವರಿಗೆ ಮಕ್ಕಳಿಲ್ಲ ಎಂದರೆ ಸರಿ. ಸದರಿ ಸರಸ್ವತಿಯವರಿಗೆ ಸರ್ವೆ ನಂ. 23 ಹಾಗೂ 28 ಕೊಟ್ಟಿರುತ್ತಾರೆ. ಸರ್ವೆ ನಂ.23 ರಲ್ಲಿ 2 ಎಕರೆ 13 ಗುಂಟೆ ಹಾಗೂ ಸರ್ವೆ ನಂ. 28 ರಲ್ಲಿ 2 ಎಕರೆ 19 ಗುಂಟೆ ಕೊಟ್ಟಿರುತ್ತಾರೆ. ಸದರಿ ಸರಸ್ವತಿ ಇವಳು ಕಣ್ಣು ಕಾಣದೇ ಇರುವುದರಿಂದ ತವರು ಮನೆಯಲ್ಲಿಯೇ ವಾಸಿಸುತ್ತಿದ್ದಳು ಎಂದರೆ ಸಾಕ್ಷಿಯು ಹೋಗುವುದು ಬರುವುದು ಮಾಡುತ್ತಿದ್ದಳು ಎಂದು ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಸರಸ್ವತಿ ತೀರಿಕೊಂಡ ನಂತರ ಸದರಿ ಬಿಚ್ಚಯ್ಯ , ಮಲ್ಲಯ್ಯ ಹಾಗೂ ಅವರ ಕುಟುಂಬದವರು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಿಲ್ಲ. ನಾನು ಗಡಿಕೇಶವಾರ್ ಗ್ರಾಮದಲ್ಲಿ ವಾಸಿಸೂತ್ತಿದ್ದೇನೆ ಎಂದರೆ ನಾನು ಹೋಗುವುದು ಬರುವುದು ಮಾಡುತ್ತೇನೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಸದರಿ ಸರಸ್ವತಿಯವಳು ಸರ್ವೆ ನಂ. 23 ರಲ್ಲಿ 2 ಎಕರೆ 13 ಗುಂಟೆ ಹಾಗೂ ಸರ್ವೆನಂ. 28 ರಲ್ಲಿ 3 ಎಕರೆ 19 ಗುಂಟೆ ನನಗೆ ಮೃತ್ಯ ಪತ್ರ ಮುಖಾಂತರ ನನಗೆ ಬರೆದುಕೊಟ್ಟಿರುತ್ತಾರೆ. ನನ್ನ ತಂದೆ ಕೊಟ್ಟಿರುವಂತಹ ಆಸ್ತಿಗೆ ಹಾಗೂ ಮೃತ್ಯು ಪತ್ರದಲ್ಲಿ ಬರೆದಂತಹ ಆಸ್ತಿಗೆ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ಸರಸ್ವತಿಗೆ ಕಣ್ಣು ಕಾಣದೇ ಇರುವುದರಿಂದ ಮೊಸ ಮಾಡಿ ಸದರಿ ಮೃತ್ಯು ಪತ್ರವನ್ನು ತಯಾರಿಸಿರುತ್ತೇವೆ ಎಂದರೆ ಸರಿಯಿಲ್ಲ. ಅದೇ ರೀತಿ ಮೃತ್ಯು ಪತ್ರದಲ್ಲಿ ಶಿವಶರಣಪ್ಪ ಹಾಗೂ ಚಂದ್ರಶೇಖರ್ ರವರು ಸಾಕ್ಷಿ ಆಗಿರುತ್ತಾರೆ. ಸದರಿ ವಿಲ್ ಮೇಲೆ ಸಾಕ್ಷಿಯವರ ಹೆಸರು ಬೆರಳಚ್ಚು ಮಾಡಿರುವುದಿಲ್ಲ ಎಂದರೆ ಸರಿಯಿಲ್ಲ. ನಿ ಡಿ 1 ರಲ್ಲಿ ಕೈಯಿಂದ ಸಾಕ್ಷಿ ಹೆಸರು ಬರೆಯಲಾಗಿದೆ ಎಂದರೆ ಸಾಕ್ಷಿಯು ಕೈಯಿಂದ ಬರೆದರೂ ಸಹ ನಡೆಯುತ್ತದೆ ಎಂದು ಕೈಯಿಂದ ಬರೆದಿರುತ್ತಾರೆ. ನಾನು ನಿ ಡಿ 1 ಬಿಲ್ಲನ್ನು ಮಾಡುತ್ತಿರುವಾಗ ಯಾವುದೇ ಸಾಕ್ಷಿಗಳು ಇರಲಿಲ್ಲ ಹಾಗೂ

ಸದರಿ ಸರಸ್ವತಿ ಇವರಿಗೆ ಗೊತ್ತಾಗದೆ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಿಲ್ಲ. ಸದರಿ ಸರಸ್ವತಿಯವರಿಗೆ ಯಾವುದೇ ಮಕ್ಕಳು ಇರದೇ ಇರುವುದರಿಂದ ದಾವಾ ಸ್ವತ್ತು ಅವಳ ತವರು ಮನೆಯವರಿಗೆ ಬರಬೇಕು ಎಂದರೆ ಸರಿಯಿಲ್ಲ. ಸದರಿ ಆಸ್ತಿಗೆ ಅವಳ ತವರು ಮನೆಯವರೇ ವಾರಸುದಾರರು ಆಗುತ್ತಾರೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**